ಮಾನ್ಯ ಯಡಿಯೂರಪ್ಪನವರಿಗೆ, ನನಗೆ ಕೊಡಲಿಲ್ಲ. ಇನ್ನೊಂದು ಸಲಹೆ ಕೊಟ್ಟಿದ್ದೆ, ಒನ್ ಟೈಮ್ ಅಪರೇಷನ್ ಆಗಿ ರೈತರು ಮಾಡಿರತಕ್ಕಂಥ ಸಾಲಕ್ಕೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡಿ, ಇಷ್ಟಾದರೂ ಭಾರ ಇಳಿಸತಕ್ಕ ಕೆಲಸ ಮಾಡಿ ಎಂಬ ಮಾತನ್ನು ಹೇಳಿದೆ. ಅದಕ್ಕೆ ಉತ್ತರ ಕೊಡಲಿಲ್ಲ. ಇಲ್ಲಿ ಜೋರಾಗಿ ಗಲಾಟೆ ಮಾಡಿದರೆ ಉತ್ತರ ಸಿಗುತ್ತದೆ ಎಂದು ಅನ್ನಿಸುತ್ತದೆ.

ಉಪಾಧ್ಯಕ್ಷರು:– ಸರಕಾರದ ಕಡೆಯಿಂದ ಏನಾದರೂ ಉತ್ತರ ಹೇಳುವುದು ಇದೆಯೇ?

ಶ್ರೀ ಟಿ.ಎಂ. ಮಂಜುನಾಥ್:– ನನ್ನದೊಂದು ಮಾತಿದೆ, ನಮ್ಮ ರಾಷ್ಟ್ರದಲ್ಲಿ ದುರ್ದೈವದಿಂದ..... ಸ್ವಲ್ಪ ಇರಿ, ನಮ್ಮ ಮಾತಿಗೆ ಏತಕ್ಕೆ ಅಡ್ಡಿ ಬರುತ್ತೀರಿ?

(ಗೊಂದಲ)

(ವೆಲ್‌ನಿಂದ ಭಾರತೀಯ ಜನತಾ ಪಕ್ಷದ ಸದಸ್ಯರು, ರೈತವಿರೋಧಿ ಸರಕಾರಕ್ಕೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)

6.15 ಪಿಎಂ

ಉಪಾಧ್ಯಕ್ಷರು:– ತಾವು ಅಲ್ಲಿಂದ ಹಾಗೆ ಕೂಗಬಾರದು. ಶ್ರೀ ಯಡಿಯೂರಪ್ಪನವರೇ ತಾವು ಮಾತನಾಡುವುದು ಏನಾದರೂ ಇದ್ದರೆ ತಮ್ಮ ಜಾಗಕ್ಕೆ ಹೋಗಿ ಮಾತನಾಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಉಪಾಧ್ಯಕ್ಷರೇ....

(ಗೊಂದಲ)

ಉಪಾಧ್ಯಕ್ಷರು:– ತಾವು ಅಲ್ಲಿಂದ ಮಾತನಾಡಬಾರದು. ತಮ್ಮ ಜಾಗಕ್ಕೆ ಹೋಗಿ ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ ತಾವು ಕುಳಿತುಕೊಳ್ಳಿ. ತಮ್ಮ ಲೀಡರ್ ಎದ್ದು ನಿಂತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ....

ಶ್ರೀ ಸಿ. ಬೈರೇಗೌಡ:– ದಯಮಾಡಿ ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಕೊಡಿಸಿ....

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಉಪಾಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ವಿರೋಧಪಕ್ಷದ ನಾಯಕರು ಹಾಗೂ ಮತ್ತಿತರರು ಎತ್ತಿದಂತಹ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಿಂದ ಅವರಿಗೆ ಸಮಾಧಾನವಾಗದೇ ಇರಬಹುದು ಆದರೆ ಸರ್ಕಾರದ ನೀತಿ ಏನು ಇದೆ ಯಾವ ರೀತಿಯಲ್ಲಿ ಬಹುಶಃ ಇದನ್ನು ಪರಿಹಾರ ಮಾಡಬಹುದು ಎನ್ನುವುದನ್ನು ಪರಾಂಬರಿಸಿ ನೋಡಬೇಕು. ರೈತರಿಗೆ ಇಷ್ಟು ಅವರ ಕಷ್ಟಕ್ಕೆ ಸ್ಪಂದಿಸಿ ಇಷ್ಟು ಗಾತ್ರದಲ್ಲಿ ಸಹಾಯ ಮಾಡಿದ್ದುದು ಇತಿಹಾಸದಲ್ಲೇ ಇಲ್ಲ. ಎಷ್ಟು ಕೊಟ್ಟಿದ್ದೇವೆ. ಎಲ್ಲಾದರಲ್ಲೂ ಕೂಡ. 8 ಸಾವಿರ ಪರಿಹಾರ ಇದ್ದದ್ದು 40 ಸಾವಿರಕ್ಕೆ ಒಮ್ಮೆಲೆ ಏರಿಸಿದ್ದೇವೆ. ಸ್ವಲ್ಪ ಆಲೋಚನೆ ಮಾಡಿ. ಹೌದು ರೈತರಿಗೆ ಎಷ್ಟು ಸಹಾಯ ಮಾಡಿದರೂ ಅದು ಕಡಿಮೆ. ನಾನು ಒಪ್ಪುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ನಮ್ಮ ರೈತ ಜನಾಂಗ ಆ ಪರಿಸ್ಥಿತಿಯಲ್ಲಿ ಇದೆ. ಎಷ್ಟು ಸಹಾಯ ಮಾಡಿದರೂ ಇನ್ನು ಸಹಾಯ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಸರ್ಕಾರ ಬಂದ ಮೇಲೆ ನಾವು ಇಷ್ಟು ಜಾಗ್ರತೆ ತಕ್ಷಣ ಅಲ್ಲಿಗೆ ಹೋಗಿ ಸಹಾಯ ಮಾಡಿ ಎಷ್ಟು ಪ್ರಮಾಣದಲ್ಲಿ ಮಾಡಿದ್ದೇವೆ ಅಂತ ಹೇಳಿದರೆ ನೋಡಿ ಎಷ್ಟು ಗಾತ್ರದಲ್ಲಿ ಮಾಡಿದ್ದೇವೆ ನೋಡಿ. ಎಷ್ಟು ಮಾಡಿದರೂ ಸಾಕಾಗುವುದಿಲ್ಲ. ಏಕೆಂದರೆ ಇನ್ನು ಕೆಲವು ವಿಚಾರಗಳು ಉಳಿದಿವೆ. ನಾವು ಮಾಡತಕ್ಕಂಥ ಕಾರ್ಯಕ್ರಮ ಇಲ್ಲಿಗೆ ಮುಗಿದಿಲ್ಲ. ನಾನು ಇದರ ಬಗ್ಗೆ ಪರ್ಯಾಲೋಚನೆ ಮಾಡಿದ್ದೇನೆ. ಆ ಭಾಗದ ರೈತರಿಗೆ ಕಷ್ಟ ಇದೆ. ಅವನು ಬೆಳೆ ತೆಗೆಯುವುದಕ್ಕೆ ಬೇಕಾದಂತಹ